**ದಿನಾಂಕ: 14.02.2025ರಂದು ನಡೆದ ಪ್ರಶಾಸನ ಸಮಿತಿಯ 74ನೇ ಸಭೆಯ ನಡಾವಳಿ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ 74ನೆಯ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 14-02-2025 ಶುಕ್ರವಾರ ಬೆಳಿಗ್ಗೆ 12.30 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು.

**ಸಭೆಯಲ್ಲಿ ಹಾಜರಿದ್ದವರು:**

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು
2. ಶ್ರೀಮತಿ ಸತ್ಯವತಿ ಎಮ್., ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) – ಸದಸ್ಯರು
3. ಶ್ರೀ ಶಶಿಧರ ಜಿ, ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ – ಸದಸ್ಯರು
4. ಪ್ರೊ. ರಜನೀಶ ಕುಮಾರ ಮಿಶ್ರ, ಸಂಸ್ಕೃತ ಮತ್ತು ಇಂಡಿಕ್ ಅಧ್ಯಯನ ವಿಭಾಗ, ಜವಾಹರಲಾಲ ನೆಹರು ವಿಶ್ವವಿದ್ಯಾಲಯ, ನವದೆಹಲಿ – 110067 – ಸದಸ್ಯರು
5. ಡಾ. ಆರ್. ಶ್ರೀಧರ ಶಾಸ್ತ್ರಿ ಸೂರಿ, ಪ್ರಾಧ್ಯಾಪಕರು(ನಿ), ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು – ಸದಸ್ಯರು
6. ಡಾ. ಬಂಗಾರಮ್ಮ, ಕೆ. ನಂ–126, ಶಾಂತಿನಗರ, ನಾಗರತ್ನಮ್ಮ ಬಡಾವಣೆ, ಶಿವಮೊಗ್ಗ. 577201. – ಸದಸ್ಯರು
7. ಡಾ. ಶಿವಲಿಂಗಯ್ಯ, 'Shrungara' No. 9– 75/3 (20) Kankandy, 'B' BAJAL Post, Mangalore 575007 – ಸದಸ್ಯರು
8. ಶ್ರೀ ಬಸಪ್ಪ ಡೊಂಕಬಳ್ಳಿ, #302/302 ಶ್ರೀನಿಧಿ ನಿಲಯ, ಬೈರಪ್ಪ ಬಿಲ್ಡಿಂಗ್, 4ನೇ ಅಡ್ಡರಸ್ತೆ, ರಾಮಮಂದಿರ ರಸ್ತೆ, ಕೊಡಿಗೆಹಳ್ಳಿ, ಬೆಂಗಳೂರು– 560092 – ಸದಸ್ಯರು
9. ಶ್ರೀ ಹನುಮಂತನಾಥ ಸ್ವಾಮೀಜಿ, ಪೀಠಾಧ್ಯಕ್ಷರು, ಕುಂಚಿಟಿಗರ ಮಹಾ ಸಂಸ್ಥಾನ ಮಠ (ರಿ.), ನರಸಿಂಹಗಿರಿ ಕ್ಷೇತ್ರ, ಕೊರಟಗೆರೆ, ತುಮಕೂರು – 572129 – ಸದಸ್ಯರು
10. ಶ್ರೀ ನಾರಾಯಣ ಯಾಜಿ ಬಿನ್ ರಾಮ ಯಾಜಿ, ಕೆ.ಹೆಚ್.ಬಿ ಕಾಲೋನಿ, ಪ್ರಭಾತ ನಗರ, ಹೊನ್ನಾವರ, ಉತ್ತರ ಕನ್ನಡ–581334 – ಸದಸ್ಯರು
11. ಶ್ರೀಮತಿ ಸಮತಾ ಹೊಸಪೇಟೆ, "ಬಾಲಾಜಿ", ಕುವೆಂಪು ನಗರ ಬಸ್ ನಿಲ್ದಾಣದ ಎದುರುಗಡೆ, ಹನುಮಾನ್ ನಗರ, ಬೆಳಗಾವಿ – 19
12. ಡಾ. ಮುನೀರ್ ಅಹಮ್ಮದ್ ನಂ–403, 38ಎ ಕ್ರಾಸ್, 26ನೇ ಮೇನ್, 9ನೇ ಬ್ಲಾಕ್, ಜಯನಗರ, ಬೆಂಗಳೂರು– 560041 – ಸದಸ್ಯರು
13. ಶ್ರೀ ವಿಶ್ವನಾಥ ಪಿ. ಹಿರೇಮಠ, ಕುಲಸಚಿವರು, ಕ.ಆ.ಸೇ., ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಸದಸ್ಯ ಕಾರ್ಯದರ್ಶಿಗಳು

**ಗೈರು ಹಾಜರಾದವರು:**

1. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ – ಸದಸ್ಯರು
2. ಆಯುಕ್ತರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ – ಸದಸ್ಯರು
3. ಶ್ರೀ ಪ್ರದೀಪ್ ಈಶ್ವರ್, ಮಾನ್ಯ ವಿಧಾನಸಭಾ ಸದಸ್ಯರು, ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರ, ನಂ–516, ಪೆರೇಸಂದ್ರ ಗ್ರಾಮ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಬಳ್ಳಾಪುರ– 562104. – ಸದಸ್ಯರು

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ವಿ.ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| ವಿಷಯ 01 | ಶ್ರೀ ಹೆಚ್.ಸಿ ಬಾಲಕೃಷ್ಣ ರವರು ಮಾನ್ಯ ಶಾಸಕರು, ಮಾಗಡಿ ವಿಧಾನಸಭಾ ಕ್ಷೇತ್ರ ಇವರು ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ, ತಿಪ್ಪಸಂದ್ರ ಗ್ರಾಮದ ವಿಶ್ವವಿದ್ಯಾಲಯಕ್ಕೆ ಸೇರಿದ ಸರ್ವೆ ನಂ.40 ರಲ್ಲಿ 12 ಎಕರೆ ಜಮೀನನ್ನು 'ತಾರಾಲಯ' ನಿರ್ಮಿಸಲು ಬಿಟ್ಟುಕೊಡಲು ವಿಶ್ವವಿದ್ಯಾಲಯದಿಂದ NOC ನೀಡುವಂತೆ ಕೋರಿರುವ ಬಗ್ಗೆ. |
| ಟಿಪ್ಪಣಿ | ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ, ತಿಪ್ಪಸಂದ್ರ ಗ್ರಾಮಕ್ಕೆ ಸೇರಿದ ಸರ್ವೆ ನಂ.40 ರಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ವಿಶ್ವವಿದ್ಯಾಲಯದ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು ಸರ್ಕಾರದಿಂದ 100 ಎಕರೆ ಮಂಜೂರಾಗಿದ್ದು, ಈಗಾಗಲೇ ರೂ 25 ಕೋಟಿ ವೆಚ್ಚದಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಶೈಕ್ಷಣಿಕ, ಆಡಳಿತ ಹಾಗೂ ಹಾಸ್ಟೆಲ್ ಕಟ್ಟಡಗಳನ್ನು ನಿರ್ಮಿಸಲಾಗಿರುತ್ತದೆ. ಪ್ರಸ್ತುತ ಶ್ರೀ ಹೆಚ್.ಸಿ ಬಾಲಕೃಷ್ಣ ರವರು ಮಾನ್ಯ ಶಾಸಕರು, ಮಾಗಡಿ ವಿಧಾನಸಭಾ ಕ್ಷೇತ್ರ ಇವರ ದಿನಾಂಕ: 03.02.2025ರ ಪತ್ರದಲ್ಲಿ, ತಮ್ಮ ಮತಕ್ಷೇತ್ರ ವ್ಯಾಪ್ತಿಯ ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ, ತಿಪ್ಪಸಂದ್ರ ಗ್ರಾಮದ ಸ.ನಂ. **40**ರಲ್ಲಿ **100** ಎಕರೆ ಜಮೀನನ್ನು ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಕಾಯ್ದಿರಿಸಲಾಗಿದ್ದು, ಮಾಗಡಿ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಮತ್ತು ವಿಜ್ಞಾನಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ "**ತಾರಾಲಯ ಹಾಗೂ ವಿಜ್ಞಾನ ಕೇಂದ್ರ**"ವನ್ನು ಸ್ಥಾಪಿಸುವುದು ಅತ್ಯವಶ್ಯಕವಾಗಿರುವ ಹಿನ್ನೆಲೆಯಲ್ಲಿ ಹಾಗೂ ಸಂಸ್ಕೃತ ವಿಶ್ವವಿದ್ಯಾಲಯದ ಪಕ್ಕದಲ್ಲಿಯೇ ವಿಜ್ಞಾನ ಕೇಂದ್ರವನ್ನು ಸ್ಥಾಪಿಸುವುದರಿಂದ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಿರುವುದರಿಂದ "**ತಾರಾಲಯ ಮತ್ತು ವಿಜ್ಞಾನ ಕೇಂದ್ರ**" ವನ್ನು ಸ್ಥಾಪಿಸಲು ಅನುಕೂಲವಾಗುವಂತೆ ವಿಶ್ವವಿದ್ಯಾಲಯಕ್ಕೆ ಹಂಚಿಕೆಯಾಗಿರುವ ಜಮೀನಿನ ಪೈಕಿ **12** ಎಕರೆ ಜಾಗವನ್ನು ಬಿಟ್ಟುಕೊಡಲು ಎನ್.ಓ.ಸಿ. ನೀಡಲು ಕೋರಿರುತ್ತಾರೆ.<br>ಮಾನ್ಯ ಶಾಸಕರು ಕೋರಿರುವಂತೆ ವಿಶ್ವವಿದ್ಯಾಲಯಕ್ಕೆ ಸೇರಿದ 100 ಎಕರೆ ಜಾಗದಲ್ಲಿ 12 ಎಕರೆ ಜಾಗವನ್ನು ಬಿಟ್ಟುಕೊಡಲು ವಿಶ್ವವಿದ್ಯಾಲಯದಿಂದ NOC ನೀಡುವ ಸಂಬಂಧ ಚರ್ಚಿಸಲು ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **ಮಾನ್ಯ ಶಾಸಕರು ಕೋರಿರುವಂತೆ ವಿಶ್ವವಿದ್ಯಾಲಯಕ್ಕೆ ಸೇರಿದ 100 ಎಕರೆ ಜಾಗದಲ್ಲಿ 12 ಎಕರೆ ಜಾಗವನ್ನು ಬಿಟ್ಟುಕೊಡುವ ಸಂಬಂಧ ಪ್ರಶಾಸನ ಸಮಿತಿ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಗಿ, ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ. 112 ಎಲ್.ಜ.ಬಿ 2012, ದಿನಾಂಕ: 30.03.2013 ರಲ್ಲಿ ಗುತ್ತಿಗೆ /ಉಪಗುತ್ತಿಗೆಗೆ ನೀಡುವುದಾಗಲೀ, ಅಡಮಾನ, ವರ್ಗಾವಣೆ, ದಾನ, ಇತರೆ ಯಾವುದೇ ರೀತಿಯ ಪರಭಾರೆಯನ್ನು ಮಾಡುವ ಕುರಿತಂತೆ ಈ ಕೆಳಕಂಡಂತೆ ಷರತ್ತನ್ನು ವಿಧಿಸಲಾಗಿದೆ.**<br>**"ಮಂಜೂರಾದ ಜಮೀನನ್ನು ಕಂದಾಯ ಇಲಾಖೆಯ ಅನುಮತಿ ಇಲ್ಲದೆ ಮಾರಾಟ ಮಾಡುವುದಾಗಲೀ, ಗುತ್ತಿಗೆ /ಉಪಗುತ್ತಿಗೆಗೆ ನೀಡುವುದಾಗಲೀ, ಅಡಮಾನ, ವರ್ಗಾವಣೆ, ದಾನ, ಇತರೆ ಯಾವುದೇ ರೀತಿಯ ಪರಭಾರೆಯನ್ನು ಮಾಡಬಾರದು."**<br>**ಮೇಲ್ಕಂಡಂತೆ ಸದರಿ 100 ಎಕರೆ ಜಾಗದಲ್ಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಉದ್ದೇಶಕ್ಕಾಗಿ ಮಾತ್ರ ಬಳಸಬಹುದಾಗಿದ್ದು, ವಿಶ್ವವಿದ್ಯಾಲಯದ ಜಾಗವನ್ನು ಬೇರೆಯ ಉದ್ದೇಶಕ್ಕೆ ಬಳಸಲು ನಿರಾಪೇಕ್ಷಣೆ ಪತ್ರವನ್ನು** |

| | |
|---|---|
| | (NOC) ಕೊಡುವ ಅಧಿಕಾರವು ವಿಶ್ವವಿದ್ಯಾಲಯಕ್ಕೆ ಆಗಲಿ ಪ್ರಶಾಸನ ಸಮಿತಿಗಾಗಲಿ ಇರುವುದಿಲ್ಲ. ಆದ್ದರಿಂದ ಈ ವಿಷಯದ ಬಗ್ಗೆ ಸರ್ಕಾರದ ಮಾರ್ಗದರ್ಶನ ಕೋರಿ ಪತ್ರ ಬರೆಯಲು ನಿರ್ಣಯಿಸಿ, ಅದರಂತೆ ಕ್ರಮವಹಿಸಲು ಮಾನ್ಯ ಕುಲಪತಿಗಳು ಮತ್ತು ಕುಲಸಚಿವರಿಗೆ ಅಧಿಕಾರ ನೀಡಿ ಸಭೆಯು ತೀರ್ಮಾನಿಸಿತು. |
| ವಿಷಯ 02 | ಆನ್‌ಲೈನ್ ಮೂಲಕ ಭಾಗವಹಿಸುವ ಹಣಕಾಸು/ಪ್ರಶಿಕ್ಷಣ/ಪ್ರಶಾಸನ ಹಾಗೂ ಇತರೆ ಸಮಿತಿ ಸದಸ್ಯರಿಗೆ ಸಭಾ ಭತ್ಯೆ ನೀಡಲು ಅನುಮೋದಿಸುವ ಬಗ್ಗೆ. |
| ಟಿಪ್ಪಣಿ | ವಿಶ್ವವಿದ್ಯಾಲಯದ ಹಣಕಾಸು/ಪ್ರಶಿಕ್ಷಣ/ಪ್ರಶಾಸನ ಹಾಗೂ ಇತರೆ ಸಮಿತಿ ಸದಸ್ಯರು ತುರ್ತು ಮತ್ತು ಅನಿವಾರ್ಯ ಸಂದಂರ್ಭಗಳಲ್ಲಿ ಆನ್‌ಲೈನ್ ಮೂಲಕ ಸಭೆಗಳಲ್ಲಿ ಭಾಗವಸಿದಲ್ಲಿ ಸಭಾ ಭತ್ಯೆ ನೀಡಲು ಅನುಮೋದಿಸಲು ಮಂಡಿಸಿದೆ. |
| ನಿರ್ಣಯ | **ಆನ್‌ಲೈನ್ ಮೂಲಕ ಭಾಗವಹಿಸುವ ಸದಸ್ಯರಿಗೆ ನಿಯಮಾನುಸಾರ ಸಭಾ ಭತ್ಯೆಯನ್ನು ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಶ್ರೀ ವಿಶ್ವನಾಥ ಪಿ. ಹಿರೇಮಠ, ಕ.ಆ.ಸೇ.
ಕುಲಸಚಿವರು
ಸದಸ್ಯ ಕಾರ್ಯದರ್ಶಿಗಳು

ಡಾ. ಅಹಲ್ಯಾ ಎಸ್.
ಕುಲಪತಿಗಳು
ಅಧ್ಯಕ್ಷರು